ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೦	ಬೆಂಗಳೂರು, ಶನಿವಾರ, ೦೨ ಆಗಸ್ಟ್, ೨೦೨೫ (ಶ್ರಾವಣ ೧೧, ಶಕವರ್ಷ ೧೯೪೭)	ಸಂಚಿಕೆ ೧೫೦
Volume - 160	BENGALURU, SATURDAY, 02 AUGUST, 2025 (SHRAVANA 11, SHAKAVARSHA 1947)	Issue 150

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ರಾಜ್ಯದಲ್ಲಿ ಕರ್ನಾಟಕ ಒನ್ ಯೋಜನೆಯಡಿ ಕೇಂದ್ರಗಳನ್ನು ಸ್ಥಾಪಿಸಲು ಅನುಸರಿಸಬೇಕಾದ ಪ್ರಮಾಣಿತ ಕಾರ್ಯಚರಣೆ ವಿಧಾನದ ಕುರಿತು.

<u>ಓದಲಾಗಿದೆ</u>:

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 43 ಇಜಿಎಂ 2022, ಬೆಂಗಳೂರು, ದಿನಾಂಕ: 07.04.2022.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 146 ಇಜಿಎಂ 2023, ದಿನಾಂಕ: 11-09-2023.
3. ನಿರ್ದೇಶಕರು ಇ-ಆಡಳಿತ ಮತ್ತು ಪದನಿಮಿತ್ತ ನಿರ್ದೇಶಕರು, ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ ಇವರ ಕಡತ ಸಂಖ್ಯೆ:EDCS/ 20/ K1/ 2024-K1-EDCS (1626526).

<u>ಪ್ರಸ್ತಾವನೆ:</u>

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ:07-04-2022ರ ಆದೇಶದಲ್ಲಿ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಬೆಂಗಳೂರು ಒನ್, ಕರ್ನಾಟಕ ಒನ್ ಯೋಜನೆಗಳನ್ನು ಫ್ರಾಂಚೈಸಿಗಳ ಮೂಲಕ ಬೆಂಗಳೂರು ನಗರದಲ್ಲಿ ಬೆಂಗಳೂರು ಒನ್ ಮತ್ತು ರಾಜ್ಯಾದ್ಯಂತ ಕರ್ನಾಟಕ ಒನ್ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಕಾರ್ಯಪಡೆ ಮತ್ತು ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಕಾರ್ಯಪಡೆಯನ್ನು ರಚಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ:11-09-2023ರ ಆದೇಶದಲ್ಲಿ ನಗರ ಪ್ರದೇಶಗಳಲ್ಲಿ ಸೇವಾ ಕೇಂದ್ರಗಳ ಸಂಖ್ಯೆಗೆ ಬೇಡಿಕೆ ಹೆಚ್ಚಿಗೆ ಇರುವುದರಿಂದ ಹಾಗೂ ಹೆಚ್ಚಿನ ಸಾರ್ವಜನಿಕರಿಗೆ ಸರ್ಕಾರದ ವಿವಿಧ ಸೇವೆಗಳು ಸುಲಲಿತವಾಗಿ ಸಿಗುವಂತೆ ಮಾಡುವ ಹಿತದೃಷ್ಟಿಯಿಂದ ದಿನಾಂಕ:07-04-2022ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಒನ್ ಕೇಂದ್ರಗಳನ್ನು ಸ್ಥಾಪಿಸಲು ಇರುವ ಮಾನದಂಡಗಳನ್ನು ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಜನಸಂಖ್ಯೆಯನ್ವಯ ಹೆಚ್ಚುವರಿ ಕೇಂದ್ರಗಳನ್ನು ಸ್ಥಾಪಿಸಲು ಇರುವ ಮಾನದಂಡಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಕಡತದಲ್ಲಿ ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ ಪ್ರಸ್ತುತ ಕರ್ನಾಟಕ ಒನ್ ಕೇಂದ್ರಗಳ ಸ್ಥಾಪನೆಗಾಗಿ ಯಾವುದೇ ನಿರ್ದಿಷ್ಟವಾಗಿ ಅನುಸರಿಸಬೇಕಾದ ನಿಯಮಗಳು ಇಲ್ಲದಿರುವ ಕಾರಣ ಕೇಂದ್ರ ಸ್ಥಾಪಿಸುವಲ್ಲಿ ಹಾಗೂ ನಿರ್ವಹಣೆಯಲ್ಲಿ ಕೆಲವು ಗೊಂದಲಗಳಿರುತ್ತವೆ. ಹೀಗಾಗಿ ಕರ್ನಾಟಕ ಒನ್ ಕೇಂದ್ರಗಳ ಅಧಿಸೂಚನೆ/ಮರು-ಅಧಿಸೂಚನೆ ಕೈಗೊಳ್ಳುವ ಹಾಗೂ ಕೇಂದ್ರಗಳ ಅಮಾನತು/ನಿಷ್ಕ್ರಿಯೆಗೊಳಿಸಲು ಅನುಸರಿಸಬೇಕಾದ ನಿಯಮಗಳನ್ನು ರಚಿಸಿದ್ದಲ್ಲಿ ಆ ನಿಯಮಗಳ ಪ್ರಕಾರ ಕೇಂದ್ರಗಳ ಸ್ಥಾಪನೆಯ ಪ್ರಕ್ರಿಯೆಗೆ ಅನುಕೂಲವಾಗುವುದೆಂದು ನಿರ್ದೇಶಕರು ಇ-ಆಡಳಿತ ಮತ್ತು ಪದನಿಮಿತ್ತ ನಿರ್ದೇಶಕರು, ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ನಿರ್ದೇಶಕರು ಇ-ಆಡಳಿತ ಮತ್ತು ಪದನಿಮಿತ್ತ ನಿರ್ದೇಶಕರು, ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಕರ್ನಾಟಕ ಒನ್ ಕೇಂದ್ರಗಳ ಪ್ರಮಾಣಿತ ಕಾರ್ಯಚರಣಾ ವಿಧಾನವು ಕೇಂದ್ರಗಳ ಕಾರ್ಯಾಚರಣೆಗಳಲ್ಲಿ ದಕ್ಷತೆ ಮತ್ತು ಪಾರದರ್ಶಕತೆಯನ್ನು ಸುಧಾರಿಸುವ ಗುರಿಯನ್ನು ಹೊಂದಿರುವುದರಿಂದ, ರಾಜ್ಯದಲ್ಲಿ ಕರ್ನಾಟಕ ಒನ್ ಯೋಜನೆಯಡಿ ಕೇಂದ್ರಗಳನ್ನು ಸ್ಥಾಪಿಸಲು ಅನುಸರಿಸಬೇಕಾದ ಪ್ರಮಾಣಿತ ಕಾರ್ಯಚರಣೆ ವಿಧಾನವನ್ನು ರಚಿಸಲು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 126 ಇಜಿಎಂ 2025,</u>
<u>ಬೆಂಗಳೂರು, ದಿನಾಂಕ:09 ನೇ ಜುಲೈ 2025.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ-ಒನ್ ಕೇಂದ್ರದ ಆಯ್ಕೆ ಪ್ರಕ್ರಿಯೆಗಳನ್ನು ಸುಗಮಗೊಳಿಸಲು, ಸೇವಾ ವಿತರಣೆಯನ್ನು ಸುಧಾರಿಸಲು, ಕಾರ್ಯಾಚರಣೆಗಳು ಮತ್ತು ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕರ್ನಾಟಕ ಒನ್ ಕೇಂದ್ರ ಸ್ಥಾಪನೆಯ ಅಧಿಸೂಚನೆ/ಮರು-ಅಧಿಸೂಚನೆ, ಕೇಂದ್ರದ ಅಮಾನತು ಮತ್ತು ನಿಷ್ಕ್ರಿಯೆಗೊಳಿಸುವಿಕೆಗಾಗಿ ಕಾರ್ಯಚರಣಾ ವಿಧಾನಗಳನ್ನು ಈ ಕೆಳಕಂಡಂತೆ ಅನುಸರಿಸಲು ಸೂಚಿಸಿ ಆದೇಶಿಸಿದೆ.

<u>1. ಕರ್ನಾಟಕ ಒನ್ ಕೇಂದ್ರಗಳ ಸ್ಥಾಪನೆ</u>

I. ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯವು ಅನುಮೋದಿಸಿದ ಖಾಲಿಯಿರುವ ಕೇಂದ್ರಗಳಿಗೆ, ಕಾರ್ಯಾಚರಣಾ ಪಾಲುದಾರರು ಕರ್ನಾಟಕ ಒನ್ ತಂತ್ರಾಂಶದ ಮೂಲಕ ಆಸಕ್ತ ನಾಗರಿಕರಿಂದ ಆನ್ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು.

I. ಜಿಲ್ಲಾಡಳಿತ ವತಿಯಿಂದ ಅರ್ಜಿ ಆಹ್ವಾನಿಸಿರುವ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲು ಕ್ರಮ ವಹಿಸುವುದು.

II. ಅರ್ಜಿ ಆಹ್ವಾನಿಸುವ ಅವಧಿಯು ಪ್ರತಿ ತ್ರೈಮಾಸಿಕದ ಆರಂಭಿಕ ಮಾಹೆಯ 1ನೇ ತಾರೀಖಿನಿಂದ ಪ್ರಾರಂಭವಾಗಿ ಆಯಾ ಮಾಹೆಯ 15ನೇ ತಾರೀಖಿನವರೆಗೆ ಚಾಲ್ತಿಯಲ್ಲಿರುವುದು.

II. ಕಾರ್ಯಾಚರಣಾ ಪಾಲುದಾರರು ಆನ್ ಲೈನ್ ಮೂಲಕ ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ಮತ್ತು ದಾಖಲೆಗಳನ್ನು ಪ್ರತಿ ತ್ರೈಮಾಸಿಕದ ಆರಂಭಿಕ ಮಾಹೆಯ 17ನೇ ತಾರೀಖಿನೊಳಗೆ ಜಿಲ್ಲಾಡಳಿತಕ್ಕೆ ಸಲ್ಲಿಸುವುದು. ಪ್ರತಿಗಳನ್ನು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (EDCS), ಜಿಲ್ಲಾ ಯೋಜನಾ ವ್ಯವಸ್ಥಾಪಕರು (DPM) ಹಾಗೂ ವಿದ್ಯುನ್ಮಾನ

ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ ಸಂಯೋಜಕರುಗಳಿಗೂ ನೀಡುವುದು. (Hard and soft copy)

III. ಆಯ್ಕೆಯ ವಿಧಾನ:

i. ಅರ್ಜಿದಾರರ ಕನಿಷ್ಠ ವಿದ್ಯಾರ್ಹತೆಯು 10+2 ಆಗಿರತಕ್ಕದ್ದು.

ii. ಇತರೆ ಕರ್ನಾಟಕ ಒನ್ ಕೇಂದ್ರಗಳೊಂದಿಗೆ ಉದ್ದೇಶಿತ ಕೇಂದ್ರದ ಅಂತರವು ಕೆಳಕಂಡ ಕನಿಷ್ಠ ಅಂತರವನ್ನು ಹೊಂದಿರತಕ್ಕದ್ದು.

ನಗರ ಸ್ಥಳೀಯ ಸಂಸ್ಥೆಯ ವಿಧ	ಕಾಯ್ದುಕೊಳ್ಳಬೇಕಾದ ಕನಿಷ್ಠ ಅಂತರ
ಮಹಾನಗರ ಪಾಲಿಕೆ (ಸಿಸಿ)	**1000** ಮೀಟರ್ಸ್
ನಗರಸಭೆ (ಸಿಎಂಸಿ)	**700** ಮೀಟರ್ಸ್
ಪುರಸಭೆ (ಟಿಎಂಸಿ)	**500** ಮೀಟರ್ಸ್
ಪಟ್ಟಣ ಪಂಚಾಯಿತಿ (ಟಿಪಿ)	**300** ಮೀಟರ್ಸ್

ii. ಪ್ರಸ್ತುತ ಗ್ರಾಮ ಒನ್, ಕರ್ನಾಟಕ ಒನ್ ಅಥವಾ ಸಿಎಸ್‌ಸಿ ಫ್ರಾಂಚೈಸಿ ಹೊಂದಿರುವ ಅರ್ಜಿದಾರರನ್ನು ಆಯ್ಕೆಗೆ ಪರಿಗಣಿಸುವಂತಿಲ್ಲ.

iii. ಆಯ್ಕೆಯಾದ ಫ್ರಾಂಚೈಸಿಯು ಪೂರ್ಣ ಪ್ರಮಾಣದಲ್ಲಿ ಕೇಂದ್ರದ ಚಟುವಟಿಕೆಗಳಲ್ಲಿ ಮಾತ್ರ ತೊಡಗಿಸಿಕೊಳ್ಳಬೇಕು.

iv. ಪ್ರಸ್ತಾಪಿತ ಕೇಂದ್ರದ ವಿಸ್ತೀರ್ಣ ಕನಿಷ್ಠ 150 ಚ. ಅಡಿ ಇರತಕ್ಕದು.

v. ಕರ್ನಾಟಕ ಒನ್ ಫ್ರಾಂಚೈಸಿಗಳ ಆಯ್ಕೆಗೆ ಅಂಕಗಳ ಹಂಚಿಕೆಯಲ್ಲಿ ಪರಿಗಣಿಸಬೇಕಾದ ಮಾನದಂಡಗಳು.

ಕ್ರ. ಸಂ.	ಪರಿಗಣಿಸಬೇಕಾದ ಅಂಶಗಳು	ಅಂಕಗಳು
1.	ಅರ್ಜಿದಾರರು ಅಧಿಸೂಚಿತ ಕೇಂದ್ರ ಸೇರಲ್ಪಡುವ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿನ ನಿವಾಸಿಯಾಗಿದ್ದರೆ (ಆಧಾರ್/ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ ದಾಖಲೆಗಳಾಗಿ ಪರಿಗಣಿಸಬಹುದು)	ಹೌದು-5 ಇಲ್ಲ-0
2.	ಮಹಿಳೆಯರು / ಲಿಂಗತ್ವ ಅಲ್ಪಸಂಖ್ಯಾತರಾಗಿದ್ದರೆ	2
3.	ವಿಶೇಷ ಚೇತನ ಅಭ್ಯರ್ಥಿಗಳಾಗಿದ್ದರೆ	2
4.	ಆಧಾರ್ ಪ್ರಮಾಣೀಕೃತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು (ಆಧಾರ್ ಪ್ರಮಾಣ ಪತ್ರ ಪರಿಗಣಿಸುವುದು)	2
5.	ಕಂಪ್ಯೂಟರ್ ಕೋರ್ಸ್ ತರಬೇತಿ ಹೊಂದಿರುವ ಅಭ್ಯರ್ಥಿಗಳು (ತರಬೇತಿ ಸಂಸ್ಥೆಗಳಿಂದ ಪಡೆದ ಪ್ರಮಾಣಪತ್ರ)	2
6.	ಅಭ್ಯರ್ಥಿಯು ಕೇಂದ್ರ ಸ್ಥಾಪನೆಗೆ ಈಗಾಗಲೇ ಕಟ್ಟಡ ಹೊಂದಿದ್ದಲ್ಲಿ (ವಿಸ್ತೀರ್ಣ ಕನಿಷ್ಠ 150 ಚದರ ಅಡಿ) (ಮಾಲೀಕತ್ವದ	0.5

	ದಾಖಲೆ/ಬಾಡಿಗೆಯ ಕರಾರು ಪತ್ರ ಹಾಗೂ ಭೌತಿಕ ಪರಿಶೀಲನೆ ಆಧರಿಸಿ)	
7.	ಅಭ್ಯರ್ಥಿಯ ಪ್ರಸ್ತಾಪಿತ ಕಟ್ಟಡವು ಆರ್‌ಸಿಸಿ ಮಾದರಿಯದ್ದಾಗಿದ್ದಲ್ಲಿ	ಹೌದು -0.5
	(ಭೌತಿಕ ಪರಿಶೀಲನೆ ಆಧರಿಸಿ)	ಇಲ್ಲ-0
8.	ಅಭ್ಯರ್ಥಿಯ ಪ್ರಸ್ತಾಪಿತ ಕಟ್ಟಡವು ನೆಲ ಮಹಡಿಯಲ್ಲಿದ್ದರೆ	ಹೌದು-0.5
	(ಭೌತಿಕ ಪರಿಶೀಲನೆ ಆಧರಿಸಿ)	ಇಲ್ಲ-0
9.	ಐಟಿ ಸೌಕರ್ಯಗಳ ಲಭ್ಯತೆ (ಕಂಪ್ಯೂಟರ್ ಸಿಸ್ಟಮ್, ಪ್ರಿಂಟರ್, ಬಯೋ-ಮೆಟ್ರಿಕ್ ಸಾಧನ, ಇಂಟರ್ನೆಟ್ ಸಂಪರ್ಕ ಮತ್ತು ಯುಪಿಎಸ್) ಹೊಂದಿದ್ದರೆ. (ಭೌತಿಕ ಪರಿಶೀಲನೆ ಆಧರಿಸಿ)	ಹೌದು-0.5
		ಇಲ್ಲ-0
10.	ನಾಗರಿಕ ಸೌಕರ್ಯಗಳ ಲಭ್ಯತೆ (ನಾಗರಿಕ ಕುಳಿತುಕೊಳ್ಳುವ ಕುರ್ಚಿಗಳು, ಫ್ಯಾನ್, ಕುಡಿಯುವ ನೀರಿನ ಲಭ್ಯತೆ) (ಭೌತಿಕ ಪರಿಶೀಲನೆ ಆಧರಿಸಿ)	ಹೌದು-0.5
		ಇಲ್ಲ-0
11.	ಉದ್ದೇಶಿತ ಕೇಂದ್ರವು ಕರ್ನಾಟಕ ಒನ್ ಕೇಂದ್ರಗಳ ನಡುವಿನ ನಿಗದಿತ ಅಂತರಕ್ಕಿಂತ ಹೆಚ್ಚುವರಿ ಅಂತರ ಹೊಂದಿದ್ದಲ್ಲಿ, ಇತರೆ ಕರ್ನಾಟಕ ಒನ್ ಕೇಂದ್ರಗಳ ಹೆಚ್ಚುವರಿ ಅಂತರದ ಪ್ರತಿ 500 ಮೀಟರ್‌ಗೆ 0.5 ಅಂಕಗಳನ್ನು ನೀಡುವುದು. (ಗರಿಷ್ಠ 2.5 ಅಂಕಗಳು ಮೀರದಂತೆ) (ಭೌತಿಕ ಪರಿಶೀಲನೆ ಆಧರಿಸಿ)	ಗರಿಷ್ಠ 2.5
	ಒಟ್ಟು ಗರಿಷ್ಠ ಅಂಕಗಳು	**18**

ಅಭ್ಯರ್ಥಿಗಳ ನಡುವಿನ ಅಂಕಗಳು ಸಮಾನವಾಗಿದ್ದಲ್ಲಿ, ಹೆಚ್ಚಿನ ಶೈಕ್ಷಣಿಕ ಅರ್ಹತೆ ಹೊಂದಿರುವ ಅರ್ಜಿದಾರರಿಗೆ ಆಯ್ಕೆಗೊಳಿಸುವುದು. ಶೈಕ್ಷಣಿಕ ಅರ್ಹತೆಯೂ ಸಮಾನವಾಗಿ ಬಂದಲ್ಲಿ, ಮೊದಲು ಅರ್ಜಿ ಸಲ್ಲಿಸಿದ ಅರ್ಜಿದಾರರನ್ನು ಆಯ್ಕೆಗೆ ಪರಿಗಣಿಸುವುದು.

IV ಜಿಲ್ಲಾಡಳಿತವು ಫ್ರಾಂಚೈಸಿಯನ್ನು ಆಯ್ಕೆ ಪ್ರಕ್ರಿಯೆಗಳನ್ನು ಆಯಾ ತ್ರೈಮಾಸಿಕದ ಆರಂಭಿಕ ತಿಂಗಳ ಕೊನೆಯ ಕೆಲಸದ ದಿನದೊಳಗಾಗಿ ಪೂರ್ಣಗೊಳಿಸಿ ಫ್ರಾಂಚೈಸಿ ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸುವುದು.

V ಜಿಲ್ಲಾ ಇ-ಗವರ್ನೆನ್ಸ್ ಸೊಸೈಟಿ (DEGS) ಯಿಂದ ಆಯ್ಕೆಗೆ ಪರಿಗಣಿಸಲಾದ ಎಲ್ಲಾ ಅರ್ಜಿದಾರರ ಪಟ್ಟಿಯು ಗರಿಷ್ಠ ಆರು ತಿಂಗಳ ಮಾನ್ಯತೆಯನ್ನು ಹೊಂದಿದ್ದು, ಮೊದಲು ಆಯ್ಕೆಯಾದ ಫ್ರಾಂಚೈಸಿಯು ನಿಗದಿತ ಕಾಲಮಿತಿಯೊಳಗೆ ನಿಯಮಾನುಸಾರ ಕೇಂದ್ರ ಸ್ಥಾಪಿಸಲು ವಿಫಲವಾದಲ್ಲಿ, ಪಡೆದ ಅಂಕಗಳನುಸಾರ ಮಾನ್ಯತೆಯಲ್ಲಿರುವ ಪಟ್ಟಿಯಲ್ಲಿನ ನಂತರದ ಅರ್ಹ ಅಭ್ಯರ್ಥಿಯನ್ನು ಫ್ರಾಂಚೈಸಿ ಆಗಿ ಆಯ್ಕೆ ಮಾಡುವುದು.

VI ಆಯ್ಕೆಯಾದ ಅಭ್ಯರ್ಥಿಯು ಅಧಿಕೃತ ಆಯ್ಕೆ ಪಟ್ಟಿ ಪ್ರಕಟವಾದ 45 ದಿನಗಳೊಳಗಾಗಿ ನಿಯಮಗಳ ಪ್ರಕಾರ ಕೇಂದ್ರವನ್ನು ಸ್ಥಾಪಿಸತಕ್ಕದ್ದು, ನಿಗದಿತ ಕಾಲಮಿತಿಯಲ್ಲಿ ಕೇಂದ್ರ ಸ್ಥಾಪನೆ ಮಾಡಲು ವಿಫಲರಾದ ಅಭ್ಯರ್ಥಿಗಳ ಆಯ್ಕೆಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

2. <u>ಕೇಂದ್ರಗಳ ನಿಷ್ಕ್ರಿಯಗೊಳಿಸುವಿಕೆ:</u>

ಕೇಂದ್ರವನ್ನು ಸ್ಥಗಿತಗೊಳಿಸುವ / ನಿಷ್ಕ್ರಿಯೆಗೊಳಿಸುವ ಸಂದರ್ಭಗಳು:

I. ಕರ್ನಾಟಕ ಒನ್ ಕೇಂದ್ರದಲ್ಲಿ ಕನಿಷ್ಠ ವಹಿವಾಟುಗಳ ಸಂಖ್ಯೆಯನ್ನು ದಾಖಲಿಸದಿದ್ದಲ್ಲಿ.
II. ಫ್ರಾಂಚೈಸಿಯ ರಾಜೀನಾಮೆ ಅಂಗೀಕೃತಗೊಂಡಿದ್ದಲ್ಲಿ.
III. ಫ್ರಾಂಚೈಸಿ ಮರಣ ಹೊಂದಿದ್ದಲ್ಲಿ.
IV. ಕೇಂದ್ರ ಅಮಾನತುಗೊಂಡಿದ್ದಲ್ಲಿ.

<u>I.ವಹಿವಾಟು ಆಧಾರಿತವಾಗಿ ನಿಷ್ಕ್ರಿಯ ಕೇಂದ್ರಗಳನ್ನು ಜಿಲ್ಲಾ ವ್ಯಾಪ್ತಿಯಲ್ಲಿ ಗುರುತಿಸುವ ವಿಧಾನ</u>

ನಿಷ್ಕ್ರಿಯ ಕೇಂದ್ರಗಳ ಕನಿಷ್ಠ ವಹಿವಾಟುಗಳು	ಆಯಾ ಜಿಲ್ಲೆಗಳಲ್ಲಿ ಒಂದು ತಿಂಗಳಿನಲ್ಲಿ ನಡೆದ ಒಟ್ಟು ವಹಿವಾಟುಗಳ ಸಂಖ್ಯೆ	X30%
	ಆಯಾ ತಿಂಗಳಿಗೆ ಶೂನ್ಯ ವಹಿವಾಟುಗಳನ್ನು ದಾಖಲಿಸಿಲ್ಲದ ಕೇಂದ್ರಗಳ ಒಟ್ಟು ಸಂಖ್ಯೆ	

i. ಮೇಲಿನ ಸೂತ್ರದಡಿಯಲ್ಲಿ ಪಡೆಯಲಾದ ಕನಿಷ್ಠ ವಹಿವಾಟಿನ ಸಂಖ್ಯೆಗಿಂತ ಕಡಿಮೆ ವಹಿವಾಟುಗಳನ್ನು ದಾಖಲಿಸಿರುವ ಕೇಂದ್ರವನ್ನು ನಿಷ್ಕ್ರಿಯವೆಂದು ಗುರುತಿಸಿ, ಸದರಿ ಕೇಂದ್ರಗಳಿಗೆ ಜಿಲ್ಲಾಡಳಿತವು/ ಜಿಲ್ಲಾ ಇ-ಗವರ್ನೆನ್ಸ್ ಸೊಸೈಟಿ (DeGs) ನೋಟೀಸ್ ಜಾರಿಗೊಳಿಸುವುದು ಮತ್ತು ಉತ್ತರಿಸಲು 7 ಕೆಲಸದ ದಿನ ಕಾಲಾವಕಾಶ ನೀಡುವುದು.

ii. ನೋಟಿಸ್ ಗೆ ಉತ್ತರಿಸಿದ ನಿಷ್ಕ್ರಿಯ ಕೇಂದ್ರಗಳ ಫ್ರಾಂಚೈಸಿ ಮನವಿಯನ್ನು 7 ಕೆಲಸದ ದಿನದೊಳಗಾಗಿ ವಿಲೇಗೊಳಿಸುವುದು. ಉತ್ತರಿಸಲು ವಿಫಲವಾದ/ ಸೂಕ್ತ ಸಮಜಾಯಿಷಿ ನೀಡದ ಫ್ರಾಂಚೈಸಿ ಕೇಂದ್ರವನ್ನು ನಿಷ್ಕ್ರಿಯೆಗೊಳಿಸಲು ಕ್ರಮವಹಿಸುವುದು ಹಾಗೂ ನಿಷ್ಕ್ರಿಯೆಗೊಳಿಸಿದ ಬಗ್ಗೆ ಅಗತ್ಯ ಆದೇಶವನ್ನು ಜಿಲ್ಲಾಡಳಿತ/ ಜಿಲ್ಲಾ ಇ-ಗವರ್ನೆನ್ಸ್ ಸೊಸೈಟಿ (DeGS) ನಿಂದ ಹೊರಡಿಸುವುದು.

II. <u>ಫ್ರಾಂಚೈಸಿಯ ರಾಜೀನಾಮೆ ಪ್ರಕರಣ</u>

ಫ್ರಾಂಚೈಸಿಯು ತನ್ನ ಕರ್ನಾಟಕ ಒನ್ ಕೇಂದ್ರವನ್ನು ಸ್ಥಗಿತಗೊಳಿಸಲು ಇಚ್ಛಿಸಿದಲ್ಲಿ ನೇರವಾಗಿ ಸಂಬಂಧಪಟ್ಟ ಜಿಲ್ಲಾಡಳಿತ/ ಜಿಲ್ಲಾ ಇ-ಗವರ್ನೆನ್ಸ್ ಸೊಸೈಟಿ (DeGS)ಗೆ ರಾಜೀನಾಮೆಯನ್ನು ಸಲ್ಲಿಸುವುದು, ರಾಜೀನಾಮೆಯನ್ನು ಕೆಲಸದ 7 ದಿನಗಳಲ್ಲಿ ವಿಲೇಗೊಳಿಸಿ, ಜಿಲ್ಲಾಡಳಿತ/ ಜಿಲ್ಲಾ ಇ-ಗವರ್ನೆನ್ಸ್ ಸೊಸೈಟಿ (DeGs) ವತಿಯಿಂದ ಅಗತ್ಯ ಆದೇಶವನ್ನು ಹೊರಡಿಸುವುದು.

III. <u>ಫ್ರಾಂಚೈಸಿ ಮರಣ ಪ್ರಕರಣ</u>

ಕರ್ನಾಟಕ ಒನ್ ಫ್ರಾಂಚೈಸಿಯ ಮರಣವಾದಲ್ಲಿ ಸದರಿ ಕೇಂದ್ರದ ಮಾಲೀಕತ್ವವನ್ನು ವರ್ಗಾಯಿಸುವಂತಿಲ್ಲ ಹಾಗೂ ಸ್ಥಗಿತಗೊಳಿಸುವುದು.

IV. <u>ಕೇಂದ್ರಗಳ ಅಮಾನತು ಪ್ರಕರಣ</u>

I. ಈ ಕೆಳಕಂಡ ಸಂದರ್ಭಗಳಲ್ಲಿ ಕರ್ನಾಟಕ ಒನ್ ಕೇಂದ್ರಗಳನ್ನು ಅಮಾನತುಗೊಳಿಸ ಬಹುದಾಗಿದೆ.

i. ಫ್ರಾಂಚೈಸಿ ಕೇಂದ್ರದಲ್ಲಿ ನಿಗದಿತ ಶುಲ್ಕಕ್ಕಿಂತ ಅಧಿಕ ಶುಲ್ಕವನ್ನು ಪಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಲ್ಲಿ.
ii. ಕೇಂದ್ರದ ಸ್ಥಾಪನೆಯಲ್ಲಿ ಬ್ಯಾಂಡಿಂಗ್ ಮಾರ್ಗಸೂಚಿಗಳು ಪಾಲನೆಯಾಗದಿದ್ದಲ್ಲಿ.
iii. ಪೂರ್ವಾನುಮತಿಯಿಲ್ಲದೇ ನಿಗದಿತ ಕೆಲಸದ ಸಮಯದಲ್ಲಿ ಕೇಂದ್ರಗಳು ಸ್ಥಗಿತವಾಗಿದ್ದಲ್ಲಿ,
iv. ಕೇಂದ್ರದಲ್ಲಿ ನಾಗರಿಕರಿಗೆ ಸೇವೆಗಳನ್ನು ನಿರಾಕರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಲ್ಲಿ,
v. ಕೇಂದ್ರದಲ್ಲಿ ನಿಯಮ ಬಾಹಿರ ಚಟುವಟಿಕೆಗಳು ಮೇಲ್ನೋಟಕ್ಕೆ ಕಂಡು ಬಂದ ಬಂದಲ್ಲಿ.

II. ಮೇಲ್ಕಂಡ ಸಂಧರ್ಭಗಳಲ್ಲಿ ಜಿಲ್ಲಾಡಳಿತವು/ ಜಿಲ್ಲಾ ಇ-ಗವರ್ನೆನ್ಸ್ ಸೊಸೈಟಿ (DeGS) ಸದರಿ ಕೇಂದ್ರಗಳನ್ನು ಅಮಾನತಿನಲ್ಲಿರಿಸಿ ಸದರಿ ಕೇಂದ್ರದ ಲಾಗಿನ್ ID ಗಳನ್ನು ನಿಷ್ಕ್ರಿಯಗೊಳಿಸಲು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯಕ್ಕೆ ಕೋರುವುದು.

III. ಜಿಲ್ಲಾ ಯೋಜನಾ ವ್ಯವಸ್ಥಾಪಕರು (DPM) ಅಮಾನತುಗೊಂಡ ಕೇಂದ್ರಗಳ ಬಗ್ಗೆ ವಿವರವಾದ ವರದಿಯನ್ನು ಅಗತ್ಯ ಶಿಫಾರಸ್ಸುಗಳೊಂದಿಗೆ 10 ಕೆಲಸದ ದಿನಗಳೊಳಗೆ ಸಂಬಂದಪಟ್ಟ ಜಿಲ್ಲಾಡಳಿತಕ್ಕೆ/ ಜಿಲ್ಲಾ ಇ-ಗವರ್ನೆನ್ಸ್ ಸೊಸೈಟಿಗೆ (DEGS) ಒದಗಿಸುವುದು. ಜಿಲ್ಲಾ ಯೋಜನಾ ವ್ಯವಸ್ಥಾಪಕರುಗಳು (DPM) ಸಲ್ಲಿಸಿದ ವರದಿಯ ಬಗ್ಗೆ ಸಂಬಂದಪಟ್ಟ ಜಿಲ್ಲಾಡಳಿತವು 10 ಕೆಲಸದ ದಿನಗಳೊಳಗೆ ಕ್ರಮ ವಹಿಸಿ ಸೂಕ್ತ ಆದೇಶ ಹೊರಡಿಸುವುದು. ಒಟ್ಟು 20 ಕೆಲಸದ ದಿನಗಳಲ್ಲಿ ಅಮಾನತುಗೊಂಡ ಕೇಂದ್ರಗಳ ಬಗ್ಗೆ ಯಾವುದೇ ನಿರ್ಣಯವಾಗದಿದ್ದ ಪಕ್ಷದಲ್ಲಿ ಸದರಿ ಕೇಂದ್ರಗಳನ್ನು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ ಕಚೇರಿಯು ಪುನಃ ಸಕ್ರಿಯಗೊಳಿಸುವುದು.

IV. ಅಮಾನತುಗೊಳಿಸಲಾದ ಕೇಂದ್ರಗಳನ್ನು ನಿಷ್ಕ್ರಿಯಗೊಳಿಸಲು ತೀರ್ಮಾನಿಸಿದಲ್ಲಿ ಕೇಂದ್ರವನ್ನು ನಿಷ್ಕ್ರಿಯಗೊಳಿಸುವುದು ಇಲ್ಲವಾದಲ್ಲಿ ಸಕ್ರಿಯಗೊಳಿಸುವುದು.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಯಸುಧಾ. ಡಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಇ-ಆಡಳಿತ)

PR-156

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಂ. ಜಿ. ನಾಗಭೂಷಣ, ವಕೀಲರು ಮತ್ತು ನೋಟರಿ, ಮೈಸೂರು ಕಂದಾಯ ತಾಲ್ಲೂಕು, ಮೈಸೂರು ಜಿಲ್ಲೆ ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 191 ಎಲ್‌ಸಿಎಲ್ 2001, ದಿನಾಂಕ : 27-10-2001.
(2) ಶ್ರೀ ಎಂ. ಜಿ. ನಾಗಭೂಷಣ, ವಕೀಲರು ಮತ್ತು ನೋಟರಿ ಇವರು ಸಲ್ಲಿಸಿರುವ ದಿನಾಂಕ : 22-02-2023ರ ರಾಜೀನಾಮೆ ಪತ್ರ.
(3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: ಸಿಆರ್‌ಆರ್/9906/2023, ದಿನಾಂಕ : 24-05-2023.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 27-10-2001ರ ಆದೇಶದಲ್ಲಿ ಶ್ರೀ ಎಂ. ಜಿ. ನಾಗಭೂಷಣ, ವಕೀಲರು ಇವರನ್ನು ಮೈಸೂರು ಕಂದಾಯ ತಾಲ್ಲೂಕು, ಮೈಸೂರು ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ : 22-02-2023ರ ಪತ್ರದಲ್ಲಿ ಶ್ರೀ ಎಂ. ಜಿ. ನಾಗಭೂಷಣ, ವಕೀಲರು ಮತ್ತು ನೋಟರಿ ಇವರು 2019ನೇ ಸಾಲಿನವರೆಗೆ ನೋಟರಿ ವೃತ್ತಿ ನಿರ್ವಹಿಸಿದ್ದು, ತದನಂತರದ ದಿನಗಳಲ್ಲಿ ನಿರ್ವಹಿಸಿರುವುದಿಲ್ಲವೆಂದು ತಿಳಿಸಿ, ನೋಟರಿ ವೃತ್ತಿಗೆ ರಾಜೀನಾಮೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ದಿನಾಂಕ : 24-05-2023ರ ಪತ್ರದಲ್ಲಿ ಶ್ರೀ ಎಂ. ಜಿ. ನಾಗಭೂಷಣ, ವಕೀಲರು ಮತ್ತು ನೋಟರಿ ಇವರು ಆರೋಗ್ಯವಾಗಿದ್ದ ದಿನದವರೆವಿಗೂ ಮೈಸೂರು ಕಂದಾಯ ತಾಲ್ಲೂಕಿನಲ್ಲಿ ತೃಪ್ತಿಕರವಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ ಹಾಗೂ ಸದರಿಯವರ ವಿರುದ್ಧ ಯಾವುದೇ ದೂರುಗಳು ನ್ಯಾಯಾಲಯದಲ್ಲಿ ದಾಖಲಾಗಿರುವುದಿಲ್ಲವೆಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು ಜಿಲ್ಲೆ ಇವರು ಪತ್ರದಲ್ಲಿ ವರದಿ ಮಾಡಿರುತ್ತಾರೆ.

ನೋಟರಿಗಳ ಅಧಿನಿಯಮ, 1952ರ ಸೆಕ್ಷನ್ 10 ರನ್ವಯ ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/99/2023, ಬೆಂಗಳೂರು, ದಿನಾಂಕ : 22-07-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ಎಂ. ಜಿ. ನಾಗಭೂಷಣ,** ವಕೀಲರು ಮತ್ತು ನೋಟರಿ, **ಮೈಸೂರು ಕಂದಾಯ ತಾಲ್ಲೂಕು, ಮೈಸೂರು ಜಿಲ್ಲೆ** ಇವರು ನೋಟರಿ ಹುದ್ದೆಗೆ ನೀಡಿರುವ ರಾಜೀನಾಮೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ ಮತ್ತು ಸದರಿಯವರ ಹೆಸರನ್ನು ನೋಟರಿಗಳ ಅಧಿನಿಯಮ 1952ರ ಕಲಂ 10 (ಎ) ರೀತ್ಯಾ ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-157

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ರಾಘವೇಂದ್ರ ಹೆಚ್., ವಕೀಲರು ಮತ್ತು ನೋಟರಿ, ಶಿಕಾರಿಪುರ ಕಂದಾಯ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 227 ಎಲ್‌ಸಿಎಲ್ 2016, ದಿನಾಂಕ : 27-09-2017.
(2) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: ADM.DJS.14299/2024, ದಿನಾಂಕ : 25-07-2024.
(3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: ADM.DJS.12141/2025, ದಿನಾಂಕ : 06-06-2025.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 27-09-2017ರ ಆದೇಶದಲ್ಲಿ ಶ್ರೀ ರಾಘವೇಂದ್ರ ಹೆಚ್., ವಕೀಲರು ಇವರನ್ನು ಶಿಕಾರಿಪುರ ಕಂದಾಯ ತಾಲ್ಲೂಕು, ಶಿವಮೊಗ್ಗ ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ಮತ್ತು (3)ರ ಪತ್ರಗಳಲ್ಲಿ ಶ್ರೀ ರಾಘವೇಂದ್ರ ಹೆಚ್., ವಕೀಲರು ಮತ್ತು ನೋಟರಿ ಇವರು ದಿನಾಂಕ : 12-03-2024 ರಂದು ನಿಧನ ಹೊಂದಿರುವುದಾಗಿ ವರದಿ ಮಾಡುತ್ತಾ, ಈ ಹಿಂದೆ ಸದರಿಯವರಿಗೆ ಸರ್ಕಾರದಿಂದ ವಿತರಿಸಿದ ದಿನಾಂಕ : 13-12-2022ರ ನೋಟರಿ ವೃತ್ತಿ ಪ್ರಮಾಣ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/208/2022ರ ಮೂಲ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಮುಂದಿನ ಅಗತ್ಯ ಕ್ರಮವಹಿಸುವಂತೆ ಕೋರಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ ಜಿಲ್ಲೆ ಇವರು ಸಲ್ಲಿಸಿರುವ ಪತ್ರ ಮತ್ತು ದಾಖಲೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/171/2024, ಬೆಂಗಳೂರು, ದಿನಾಂಕ : 22-07-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ರಾಘವೇಂದ್ರ ಹೆಚ್.,** ವಕೀಲರು ಮತ್ತು ನೋಟರಿ, **ಶಿಕಾರಿಪುರ ಕಂದಾಯ ತಾಲ್ಲೂಕು, ಶಿವಮೊಗ್ಗ ಜಿಲ್ಲೆ** ಇವರು ದಿನಾಂಕ : 12-03-2024 ರಂದು ನಿಧನ ಹೊಂದಿರುವುದರಿಂದ ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-158

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀಮತಿ ಲೋಹಿತಾ ಬಿ.ಜೆ.ಜಿ., ವಕೀಲರು ಮತ್ತು ನೋಟರಿ, ಭದ್ರಾವತಿ ಕಂದಾಯ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 251 ಎಲ್‌ಸಿಎಲ್ 2015, ದಿನಾಂಕ : 16-06-2016.
(2) ಅಧ್ಯಕ್ಷರು, ವಕೀಲರ ಸಂಘ (ನೋಂ), ಭದ್ರಾವತಿ, ಶಿವಮೊಗ್ಗ ಜಿಲ್ಲೆ ಇವರು ಸಲ್ಲಿಸಿರುವ ದಿನಾಂಕ : 23-08-2024.
(3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: ADM.DJS.12141/2025, ದಿನಾಂಕ : 06-06-2025.

--*-*-*

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 16-06-2016ರ ಆದೇಶದಲ್ಲಿ ಶ್ರೀಮತಿ ಲೋಹಿತಾ ಬಿ.ಜೆ.ಜಿ., ವಕೀಲರು ಇವರನ್ನು ಭದ್ರಾವತಿ ಕಂದಾಯ ತಾಲ್ಲೂಕು, ಶಿವಮೊಗ್ಗ ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಭದ್ರಾವತಿ ವಕೀಲರ ಸಂಘದಲ್ಲಿ ಹಿರಿಯ ವಕೀಲೆಯಾದ ಮತ್ತು ನೋಟರಿಯವರಾದ ಶ್ರೀಮತಿ ಬಿ.ಜೆ.ಲೋಹಿತ ರವರು ದಿನಾಂಕ : 29-04-2023 ರಂದು ಮರಣ ಹೊಂದಿದ್ದು, ಸದರಿ ನೋಟರಿ ಹುದ್ದೆ ಖಾಲಿ ಉಳಿದಿರುತ್ತದೆ. ಆದಕಾರಣ ನೋಟರಿ ಹುದ್ದೆಯನ್ನು ಭರ್ತಿ ಮಾಡಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಪತ್ರದಲ್ಲಿ ಶ್ರೀಮತಿ ಲೋಹಿತಾ ಬಿ.ಜಿ., ವಕೀಲರು ಮತ್ತು ನೋಟರಿ ಇವರಿಗೆ ಈ ಹಿಂದೆ ಸರ್ಕಾರದಿಂದ ವಿತರಿಸಿದ ದಿನಾಂಕ : 01-01-2022ರ ನೋಟರಿ ವೃತ್ತಿ ಪ್ರಮಾಣ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/98/2021ರ ಮೂಲ ಪತ್ರವನ್ನು ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಅಧ್ಯಕ್ಷರು, ಭದ್ರಾವತಿ ವಕೀಲರ ಸಂಘ ಮತ್ತು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ ಜಿಲ್ಲೆ, ಇವರು ಸಲ್ಲಿಸಿರುವ ಪತ್ರ ಮತ್ತು ದಾಖಲೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/218/2024, ಬೆಂಗಳೂರು, ದಿನಾಂಕ : 25-07-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀಮತಿ ಲೋಹಿತಾ ಬಿ.ಜೆ.ಜಿ.,** ವಕೀಲರು ಮತ್ತು ನೋಟರಿ, ಭದ್ರಾವತಿ ಕಂದಾಯ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರು ದಿನಾಂಕ : 29-04-2023 ರಂದು ನಿಧನ ಹೊಂದಿರುವುದರಿಂದ ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-159

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಕೆ. ಸಿ. ಅಚ್ಚಯ್ಯ, ವಕೀಲರು ಮತ್ತು ನೋಟರಿ, ಕೊಡಗು ಕಂದಾಯ ತಾಲ್ಲೂಕು, ಕೊಡಗು ಜಿಲ್ಲೆ ಇವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 78 ಎಲ್‌ಸಿಎಲ್ 1999, ದಿನಾಂಕ : 08-07-1999.
(2) ಶ್ರೀಮತಿ ವಿಮ್ಮಿ ಅಚ್ಚಯ್ಯ ಕೆ., W/o ಲೇಟ್ ಕೆ. ಸಿ. ಅಚ್ಚಯ್ಯ, ಸೋಮವಾರಪೇಟೆ, ಕೊಡಗು ಇವರು ಸಲ್ಲಿಸಿರುವ ದಿನಾಂಕ : 21-06-2023ರ ಪತ್ರ.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 08-07-1999ರ ಆದೇಶದಲ್ಲಿ ಶ್ರೀ ಕೆ. ಸಿ. ಅಚ್ಚಯ್ಯ, ವಕೀಲರು ಇವರನ್ನು ಕೊಡಗು ಕಂದಾಯ ತಾಲ್ಲೂಕು, ಕೊಡಗು ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಶ್ರೀ ಕೆ. ಸಿ. ಅಚ್ಚಯ್ಯ, ವಕೀಲರು ಮತ್ತು ನೋಟರಿ ಇವರು ದಿನಾಂಕ : 25-02-2023 ರಂದು ನಿಧನ ಹೊಂದಿದ್ದು, ಸರ್ಕಾರದಿಂದ ವಿತರಿಸಿದ ದಿನಾಂಕ : 29-08-2022ರ ನೋಟರಿ ವೃತ್ತಿ ಪ್ರಮಾಣ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/144/2022ರ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಸದರಿಯವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವಂತೆ ಶ್ರೀಮತಿ ವಿಮ್ಮಿ ಅಚ್ಚಯ್ಯ ಕೆ. W/o ಶ್ರೀ ಕೆ. ಸಿ. ಅಚ್ಚಯ್ಯ, ಕೊಡಗು ಇವರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/129/2023,
ಬೆಂಗಳೂರು, ದಿನಾಂಕ : 25-07-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಕೆ.ಸಿ. ಅಚ್ಚಯ್ಯ, ವಕೀಲರು ಮತ್ತು ನೋಟರಿ, ಕೊಡಗು ಕಂದಾಯ ತಾಲ್ಲೂಕು, ಕೊಡಗು ಜಿಲ್ಲೆ ಇವರು ದಿನಾಂಕ : 25-02-2023 ರಂದು ನಿಧನ ಹೊಂದಿರುವುದರಿಂದ ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-160

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಯು. ಯಾಕೂಬ್, ವಕೀಲರು ಮತ್ತು ನೋಟರಿ, ಬೆಳ್ತಂಗಡಿ ಕಂದಾಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 239 ಎಲ್‌ಸಿಎಲ್ 2015, ದಿನಾಂಕ : 09-09-2015.
(2) ಶ್ರೀ ಕೆ. ವಸಂತ ಬಂಗೇರ, ಮಾಜಿ ಶಾಸಕರು, ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ, ದಕ್ಷಿಣ ಕನ್ನಡ ಜಿಲ್ಲೆ ಇವರು ಸಲ್ಲಿಸಿರುವ ದಿನಾಂಕ : 27-07-2023ರ ಪತ್ರ.
(3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಕ್ಷಿಣ ಕನ್ನಡ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: ಎಡಿಎಂಎನ್/3126/2024, ದಿನಾಂಕ : 12-03-2024.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 09-09-2015ರ ಆದೇಶದಲ್ಲಿ ಶ್ರೀ ಯು. ಯಾಕೂಬ್, ವಕೀಲರು ಇವರನ್ನು ಬೆಳ್ತಂಗಡಿ ಕಂದಾಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಬೆಳ್ತಂಗಡಿಯಲ್ಲಿ ನೋಟರಿ ವಕೀಲರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಯು. ಯಾಕೂಬ್, ವಕೀಲರು ಮತ್ತು ನೋಟರಿ ಇವರು ದಿನಾಂಕ : 21-03-2022 ರಂದು ಮರಣ ಹೊಂದಿರುವುದಾಗಿ ತಿಳಿಸಿ, ಸದರಿ ಹುದ್ದೆಗೆ ಬೇರೆಯವರನ್ನು ನೇಮಕ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಶಾಸಕರು, ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ, ದಕ್ಷಿಣ ಕನ್ನಡ ಜಿಲ್ಲೆ ಇವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಪತ್ರದಲ್ಲಿ ಶ್ರೀ ಯು. ಯಾಕೂಬ್, ವಕೀಲರು ಮತ್ತು ನೋಟರಿ ಇವರು ದಿನಾಂಕ : 21-03-2022ರಂದು ಮರಣ ಹೊಂದಿರುವ ಬಗ್ಗೆ ಮರಣ ಪ್ರಮಾಣ ಪತ್ರದ ಪ್ರತಿ ಮತ್ತು ಈ ಹಿಂದೆ ಸರ್ಕಾರದಿಂದ ವಿತರಿಸಿದ ದಿನಾಂಕ : 20-10-2015ರ ನೋಟರಿ ವೃತ್ತಿ ಪ್ರಮಾಣ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/239/2015ರ ಮೂಲ ಪತ್ರವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಕ್ಷಿಣ ಕನ್ನಡ ಜಿಲ್ಲೆ ಇವರು ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಮಾನ್ಯ ಮಾಜಿ ಶಾಸಕರು, ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಕ್ಷಿಣ ಕನ್ನಡ ಜಿಲ್ಲೆ, ಇವರು ಸಲ್ಲಿಸಿರುವ ಪತ್ರ ಮತ್ತು ದಾಖಲೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/140/2023, ಬೆಂಗಳೂರು, ದಿನಾಂಕ : 25-07-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ಯು. ಯಾಕೂಬ್,** ವಕೀಲರು ಮತ್ತು ನೋಟರಿ, ಬೆಳ್ತಂಗಡಿ ಕಂದಾಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರು ದಿನಾಂಕ : 21-03-2022 ರಂದು ನಿಧನ ಹೊಂದಿರುವುದರಿಂದ ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-161

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ತೋರಣದಿನ್ನಿ ಸೂಗಪ್ಪ ಸೋಮಶೇಖರಪ್ಪ, ವಕೀಲರು ಮತ್ತು ನೋಟರಿ, ರಾಯಚೂರು ಕಂದಾಯ ತಾಲ್ಲೂಕು, ರಾಯಚೂರು ಜಿಲ್ಲೆ ಇವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 194 ಎಲ್‌ಸಿಎಲ್ 1994, ದಿನಾಂಕ : 16-06-1995.
(2) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಯಚೂರು ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: 4325/ಆಡಳಿತ/2023, ದಿನಾಂಕ : 03-11-2023.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 16-06-1995ರ ಆದೇಶದಲ್ಲಿ ಶ್ರೀ ತೋರಣದಿನ್ನಿ ಸೂಗಪ್ಪ ಸೋಮಶೇಖರಪ್ಪ, ವಕೀಲರು ಇವರನ್ನು ರಾಯಚೂರು ಕಂದಾಯ ತಾಲ್ಲೂಕು, ರಾಯಚೂರ ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಶ್ರೀ ತೋರಣದಿನ್ನಿ ಸೂಗಪ್ಪ ಸೋಮಶೇಖರಪ್ಪ, ವಕೀಲರು ಮತ್ತು ನೋಟರಿ ಇವರು ದಿನಾಂಕ : 07-02-2022 ರಂದು ಮರಣ ಹೊಂದಿರುವುದಾಗಿ ತಿಳಿಸಿ, ಮರಣ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸುತ್ತಾ, ಸದರಿಯವರ ನಿಧನದಿಂದ ತೆರವಾದ ನೋಟರಿ ಹುದ್ದೆಯನ್ನು ಭರ್ತಿ

ಮಾಡಬಹುದು ಎಂದು ಕೋರಿರುತ್ತಾರೆ. ಸದರಿಯವರಿಗೆ ಈ ಹಿಂದೆ ಸರ್ಕಾರದಿಂದ ವಿತರಿಸಿದ ದಿನಾಂಕ : 01-01-2022ರ ನೋಟರಿ ವೃತ್ತಿ ಪ್ರಮಾಣ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/81/2021ರ ಅವಧಿಯು ದಿನಾಂಕ : 11-07-2026 ರಂದು ಮುಕ್ತಾಯಗೊಳ್ಳುತ್ತದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಯಚೂರು ಜಿಲ್ಲೆ, ಇವರು ಸಲ್ಲಿಸಿರುವ ಪತ್ರ ಮತ್ತು ದಾಖಲೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/165/2023, ಬೆಂಗಳೂರು, ದಿನಾಂಕ : 25-07-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ತೋರಣದಿನ್ನಿ ಸೂಗಪ್ಪ ಸೋಮಶೇಖರಪ್ಪ,** ವಕೀಲರು ಮತ್ತು ನೋಟರಿ, **ರಾಯಚೂರು ಕಂದಾಯ ತಾಲ್ಲೂಕು, ರಾಯಚೂರು ಜಿಲ್ಲೆ** ಇವರು ದಿನಾಂಕ : 07-02-2022ರಂದು ನಿಧನ ಹೊಂದಿರುವುದರಿಂದ ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆಯಲಾಗಿದೆ.

ಮುಂದುವರೆದು, ಸದರಿಯವರಿಗೆ ದಿನಾಂಕ : 01-01-2022ರಂದು ವಿತರಿಸಿದ ನೋಟರಿ ವೃತ್ತಿ ಪ್ರಮಾಣ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/81/2021ನ್ನು ತಕ್ಷಣದಿಂದ ರಾಜಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-162

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಸಿದ್ರಾಮ ಶರಣಪ್ಪ ಪೂಜಾರಿ, ವಕೀಲರು ಮತ್ತು ನೋಟರಿ, ಇಂಡಿ ಕಂದಾಯ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 13 ಎಲ್‌ಸಿಎಲ್ 2014, ದಿನಾಂಕ : 21-11-2014.
(2) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: ಸಿಪಿಎನ್/9599/2024, ದಿನಾಂಕ : 07-08-2024.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 21-11-2014ರ ಆದೇಶದಲ್ಲಿ ಶ್ರೀ ಸಿದ್ರಾಮ ಶರಣಪ್ಪ ಪೂಜಾರಿ, ವಕೀಲರು ಇವರನ್ನು ಇಂಡಿ ಕಂದಾಯ ತಾಲ್ಲೂಕು, ವಿಜಯಪುರ ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಶ್ರೀ ಸಿದ್ರಾಮ ಶರಣಪ್ಪ ಪೂಜಾರಿ, ವಕೀಲರು ಮತ್ತು ನೋಟರಿ ಇವರು ದಿನಾಂಕ : 10-08-2023ರಂದು ಮರಣ ಹೊಂದಿರುವುದಾಗಿ ತಿಳಿಸಿ, ಮರಣ ಪ್ರಮಾಣ ಪತ್ರದ ಪ್ರತಿ ಲಗತ್ತಿಸಿ ಕಳುಹಿಸಿರುತ್ತಾರೆ. ಸದರಿಯವರಿಗೆ ಈ ಹಿಂದೆ ಸರ್ಕಾರದಿಂದ ವಿತರಿಸಿದ ದಿನಾಂಕ : 24-11-2020ರ

ನೋಟರಿ ವೃತ್ತಿ ಪ್ರಮಾಣ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/7/2020ರ ಅವಧಿಯು ದಿನಾಂಕ : 20-11-2024 ಕ್ಕೆ ಮುಕ್ತಾಯಗೊಂಡಿರುತ್ತದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ ಜಿಲ್ಲೆ ಇವರು ಸಲ್ಲಿಸಿರುವ ಪತ್ರ ಮತ್ತು ದಾಖಲೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/227/2024, ಬೆಂಗಳೂರು, ದಿನಾಂಕ : 25-07-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ಸಿದ್ರಾಮ ಶರಣಪ್ಪ ಪೂಜಾರಿ,** ವಕೀಲರು ಮತ್ತು ನೋಟರಿ, **ಇಂಡಿ ಕಂದಾಯ ತಾಲ್ಲೂಕು, ವಿಜಯಪುರ ಜಿಲ್ಲೆ** ಇವರು ದಿನಾಂಕ : 10-08-2023 ರಂದು ನಿಧನ ಹೊಂದಿರುವುದರಿಂದ ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-163

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಂ. ಎ. ರಮೇಶ್, ವಕೀಲರು ಮತ್ತು ನೋಟರಿ, ವಿರಾಜಪೇಟೆ ಕಂದಾಯ ತಾಲ್ಲೂಕು, ಕೊಡಗು ಜಿಲ್ಲೆ ಇವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 327 ಎಲ್‌ಸಿಎಲ್ 1998, ದಿನಾಂಕ : 27-10-1998.
(2) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೊಡಗು ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: 996/2025, ದಿನಾಂಕ : 04-03-2025.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 27-10-1998ರ ಆದೇಶದಲ್ಲಿ ಶ್ರೀ ಎಂ. ಎ. ರಮೇಶ್, ವಕೀಲರು ಇವರನ್ನು ವಿರಾಜಪೇಟೆ ಕಂದಾಯ ತಾಲ್ಲೂಕು, ಕೊಡಗು ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಶ್ರೀ ಎಂ. ಎ. ರಮೇಶ್, ವಕೀಲರು ಮತ್ತು ನೋಟರಿ ಇವರು ದಿನಾಂಕ : 11-10-2024ರಂದು ಮರಣ ಹೊಂದಿದ್ದು, ಸದರಿಯವರಿಗೆ ಈ ಹಿಂದೆ ಸರ್ಕಾರದಿಂದ ವಿತರಿಸಿದ ದಿನಾಂಕ : 14-01-2022ರ ನೋಟರಿ ವೃತ್ತಿ ಪ್ರಮಾಣ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/264/2021ರ ಮೂಲ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸುತ್ತಾ, ಮುಂದಿನ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೊಡಗು ಜಿಲ್ಲೆ ಇವರು ಸಲ್ಲಿಸಿರುವ ಪತ್ರ ಮತ್ತು ದಾಖಲೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/90/2025, ಬೆಂಗಳೂರು, ದಿನಾಂಕ : 25-07-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ಎಂ. ಎ. ರಮೇಶ್,** ವಕೀಲರು ಮತ್ತು ನೋಟರಿ, **ವಿರಾಜಪೇಟೆ ಕಂದಾಯ ತಾಲ್ಲೂಕು, ಕೊಡಗು ಜಿಲ್ಲೆ** ಇವರು ದಿನಾಂಕ : 11-10-2024 ರಂದು ನಿಧನ ಹೊಂದಿರುವುದರಿಂದ ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-164

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

THAMMAIAH